ಸಾಕ್ಷಿ ಯನ್ನು ದಿಃ07.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ದೂರುದಾರರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ರಾಗಿ ಹಾಗೂ ಜೋಳ ಬೆಳೆಯುತ್ತೇನೆ. ತಂಬಾಕು ಬೆಳೆಯುತ್ತೇನೆ. ಬ್ಯಾನರ್ ಇದೆ.
2. ವ್ಯವಸಾಯದಿಂದ ಎಷ್ಟು ಆದಾಯ ಬರುತ್ತದೆ ಎಂದರೆ, ನಷ್ಟವಾಗುತ್ತದೆ, ಖರ್ಚು ಸಹ ಬರುವುದಿಲ್ಲ. ವ್ಯವಸಾಯಕ್ಕೆ ಸಾಲ ಸಹ ಮಾಡುತ್ತೀರಾ ಎಂದರೆ ಸರಿ. ನಾನು ಸೊಸೈಟಿಯಲ್ಲಿ ಸಾಲ ಮಾಡುತ್ತೇನೆ. ಬ್ಯಾಂಕುಗಳಲ್ಲಿ ಮಾಡುವುದಿಲ್ಲ.
3. ನನಗೆ ಒಂದೇ ಎಕರೆ ಇದೆ. ವ್ಯವಸಾಯಕ್ಕೆ 10-12 ಸಾವಿರ ಖರ್ಚು ಮಾಡುತ್ತೇನೆ. ಅದಕ್ಕೆ ಕೈ ಸಾಲ ಮಾಡುತ್ತೀರಾ ಎಂದರೆ ಸರಿಯಲ್ಲ.
4. ನಿಪಿ - 5 ರ ಅಂಚೆ ಸ್ವೀಕೃತಿ ನಿಮ್ಮದೇ ಎಂದರೆ ಸರಿಯಲ್ಲ, ಅದರಲ್ಲಿರುವ ಸಹಿ ನನ್ನದಲ್ಲ.
5. ನಿಮ್ಮ ಹಾಗೂ ದೂರುದಾರರ ನಡುವೆ ಹಣಕಾಸಿನ ವ್ಯವಹಾರ ಆಗಿದೆ ಎಂದರೆ ಸರಿಯಲ್ಲ. ಚೀಟಿ ವ್ಯವಹಾರ ಮಾತ್ರ ಆಗಿದೆ.
6. ನೀವು ನಿಮ್ಮ ಕಾನೂನಬದ್ಧ ಅವಶ್ಯಕತೆಗಾಗಿ ದೂರುದಾರರಿಂದ ಸಾಲ ಮಾಡಿದ್ದೀರಿ ಎಂದರೆ ಸರಿಯಲ್ಲ.
7. ದೂರುದಾರರಿಗೆ ಸಾಲ ಮರುಪಾವತಿ ಮಾಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
8. ದೂರುದಾರರು ನೀಡಿದ ಸಾಲದ ಹಣಕ್ಕೆ ಭದ್ರತೆಗಾಗಿ ನಿಪಿ - 1 ರ ಚೆಕ್ಕು ನೀಡಿದ್ದೀರಾ ಎಂದರೆ, ಚೀಟಿ ಭದ್ರತೆಗಾಗಿ ನೀಡಿದ್ದೆ.
9. ಹಲವಾರು ಬಾರಿ ದೂರುದಾರರು ಸಾಲ ವಾಪಸ್ ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಲದ ಮರುಪಾವತಿಗಾಗಿ ನೀಡಿದ ಚೆಕ್ ಸಾಕಷ್ಟು ಹಣವಿಲ್ಲ ಎಂದು ವಾಪಸ್ ಬಂದಿದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಿಮ್ಮ ಮೇಲೆ ಈ ದೂರು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ.

10. ದೂರುದಾರಿಗೆ ಸಾಲ ಮರುಪಾವತಿ ಮಾಡಬೇಕಾಗಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ